ದಿನಾಂಕ 10-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರಃ ಶ್ರೀ. ಎಂ.ಕೆ.ವಿ. ವಕೀಲರಿಂದಃ**

ನಾನು ಎಲ್ಲಾ ವಾದಿಯವರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ. ಉಳಿದ ಇಬ್ಬರು ವಾದಿಯವರು ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ದಾವಾ ಆಸ್ತಿಗಳ ಬಗ್ಗೆ ದಾವೆ ದಾಖಲು ಮಾಡಿದ ನಂತರ ಮಾಹಿತಿ ಗೊತ್ತಾಗಿದೆ. ದಾವೆ ಸಲ್ಲಿಸುವ ಸಮಯದಲ್ಲಿ ವಾದ ಪತ್ರದೊಂದಿಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ದಾವಾ ಸ್ವತ್ತುಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಪ್ರತ್ಯೇಕ ಪ್ರತ್ಯೇಕವಾಗಿ ಹೇಳಲು ಆಗುವುದಿಲ್ಲ , ಒಟ್ಟು ವಿಸ್ತೀರ್ಣ ಹೇಳಬಲ್ಲೆ. ದಾವಾ ಸ್ವತ್ತುಗಳ ಮಾಹಿತಿ ನನ್ನ ಅಪ್ಪ ಹೇಳಿದ ಕಾರಣ ಗೊತ್ತಾಗಿದೆ. ದಾವೆ ದಾಖಲಿಸುವ ಸಮಯದಲ್ಲಿ ದಾವಾ ಸ್ವತ್ತುಗಳ RTC ನನ್ನ ಅಪ್ಪನ ಹೆಸರಿನಲ್ಲಿ ಇದ್ದವು. ನನ್ನ ಅಪ್ಪನಿಗೆ ದಾವಾ ಸ್ವತ್ತುಗಳು ಹೇಗೆ ಬಂದವು ಎಂದು ಅವರನ್ನುಕೇಳಿ ತಿಳಿದುಕೊಂಡಿದ್ದೇನೆ. ಭೂ ನ್ಯಾಯಮಂಡಳಿಯಲ್ಲಿ ಮಾಡಲಾದ ಪ್ರಕರಣದ ವ್ಯವಹರಣೆಯ ವಿವರಗಳು ನನ್ನ ಅಪ್ಪ ಹೇಳಿ ಗೊತ್ತಾಗಿದೆ. ನಿ.ಪಿ. 6 ರಿಂದ ನಿ.ಪಿ.10 ದಾಖಲೆಗಳನ್ನು ನನ್ನ ತಂದೆ ನೀಡಿರುತ್ತಾರೆ. ದಾವೆ ದಾಖಲಿಸುವ ಉದ್ದೇಶದಿಂದಲೇ ನನ್ನ ಅಪ್ಪನಿಂದ ನಿ.ಪಿ.6 ರಿಂದ ನಿ.ಪಿ.10 ರ ದಾಖಲೆಗಳನ್ನು ಪಡೆದಿದ್ದೇನೆ. ನಿ.ಪಿ.6 ರಿಂದ ನಿ.ಪಿ.8 ರಲ್ಲಿ ನಮೂದಿಸಿರುವ ಅಂಶಗಳು ಸರಿ ಇರುತ್ತದೆ. ಅದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಅದೇ ರೀತಿ ಭೂ ನ್ಯಾಯಮಂಡಳಿಯವರು ನಿ.ಪಿ.9 ರಲ್ಲಿ ಮಾಡಿರುವ ಆದೇಶವನ್ನು ಓದಿ ತಿಳಿದುಕೊಂಡಿದ್ದೇನೆ ಮತ್ತು ಒಪ್ಪುತ್ತೇನೆ.

2. ನನ್ನ ಅಪ್ಪ ಮತ್ತು ಅವರ ತಮ್ಮನ ನಡುವೆ ನಿ.ಪಿ.11 ರಂತೆ ಆದ ಪಾಲುಪಟ್ಟಿಯ ಬಗ್ಗೆ ಮಾಹಿತಿಯನ್ನು ನನ್ನ ಅಪ್ಪನೇ ಕೊಟ್ಟಿದ್ದಾರೆ. ನಿ,ಪಿ.11 ರಲ್ಲಿ ನಮೂದಿಸಿರುವ ಅಂಶಗಳನ್ನು ಓದಿ ತಿಳಿದುಕೊಂಡಿದ್ದೇನೆ. ಅದರಲ್ಲಿ ನಮೂದಿಸಿರುವ ಒಕ್ಕಣೆಗಳು ಸರಿ ಇರುತ್ತದೆ.

3. ಭೂ ನ್ಯಾಯಮಂಡಳಿ ಆದೇಶದಂತೆ ನನ್ನ ಅಪ್ಪನಿಗೆ 9 ಎಕರೆ 4 ಸೆಂಟ್ಸ್ ಜಾಗ ಮಂಜೂರಾಗಿದೆ. ನನ್ನ ಅಪ್ಪ ಮತ್ತು ಅವರ ತಮ್ಮನ ನಡುವೆ ನಿ.ಪಿ.11 ರಂತೆ ಪಾಲುಪಟ್ಟಿ ನನ್ನ ಅಜ್ಜಿಯ ಮರಣದ ನಂತರ ಆಗಿದೆ. ನಿ,ಫಿ11 ಪಾಲುಪಟ್ಟಿಯಂತೆ ನನ್ನ ತಂದೆಗೆ 6 ಎಕರೆ 36 ಸೆಂಟ್ಸ್ ಹಾಗೂ ಚಿಕ್ಕಪ್ಪನಿಗೆ 2 ಎಕರೆ 68 ಸೆಂಟ್ಸ್ ವಿಭಾಗ ಆಗಿದೆ. ವಿಭಾಗದಂತೆ ಅವರು ವಾಸಿಸುತ್ತಿದ್ದ ಹೆಂಚಿನ ಮನೆ ನನ್ನ ಚಿಕ್ಕಪ್ಪನಿಗೆ ಸೇರಿದೆ. ನಂತರದಲ್ಲಿ ನನ್ನ ತಂದೆ ಬೇರೆ ಮನೆ ಕಟ್ಟಿಕೊಂಡು ಅಲ್ಲಿಯೇ ವಾಸ ಇದ್ದರು. ಪ್ರಸ್ತುತವೂ ಸಹ ಆ ಮನೆ ಇರುತ್ತದೆ. ನಿ.ಪಿ.11 ರ ಪಾಲುಪಟ್ಟಿಯನ್ನು

ನಾನಾಗಲೀ , ನನ್ನ ಸಹೋದರ ಸಹೋದರಿಯರಾಗಲಿ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಪ್ರಶ್ನೆ ಮಾಡುವ ಉದ್ಭವ ಬರಲಿಲ್ಲ ಎಂದು ನುಡಿಯುತ್ತಾರೆ.

4. ದಾವೆ ಸಲ್ಲಿಸುವಾಗ ನನ್ನ ತಂದೆಗೆ ಬಂದ 6 ಎಕರೆ 36 ಸೆಂಟ್ಸ್ ಸಂಪೂರ್ಣ ಸ್ವತ್ತನ್ನು ಸೇರಿಸಿರಲಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಸ್ವಲ್ಪ ಭಾಗವನ್ನು ನನ್ನ ತಂದೆ ಮನೆಯ ಅವಶ್ಯಕತೆಗಾಗಿ ಮಾರಾಟ ಮಾಡಿದ್ದರು ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ.  ಈ ದಾವೆಯಲ್ಲಿ 2 ಎಕರೆ 90 ಸೆಂಟ್ಸ್ ವಿಸ್ತೀರ್ಣದ ಸ್ವತ್ತನ್ನು ಸೇರಿಸಲಾಗಿದೆ. 3 ಎಕರೆ 46 ಸೆಂಟ್ಸ್ ಜಾಗವನ್ನು ನನ್ನತಂದೆ ನಾವು ಚಿಕ್ಕವರಿದ್ದಾಗಲೇ ಮಾರಾಟ ಮಾಡಿದ್ದಾರೆ.  ನನ್ನ ತಂದೆ ಮಾರಾಟ ಮಾಡಿದ ಆಸ್ತಿಗಳ ಬಗ್ಗೆ ನಾನು  ಮಾಹಿತಿಯನ್ನು ಪಡೆದಿದ್ದೇನೆ. ನನ್ನ ತಂದೆ ಮಾಡಿಕೊಟ್ಟ 3 ಎಕರೆ 46 ಸೆಂಟ್ಸ್ ಜಾಗದ ಕ್ರಯಪತ್ರವನ್ನು ಒಪ್ಪುತ್ತೇವೆ.

5.ಯಾರು ಯಾರಿಗೆ ನನ್ನ ತಂದೆ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎನ್ನುವ ಮಾಹಿತಿ ನನಗೆ ಗೊತ್ತಿದೆ.  ನನ್ನ ಪ್ರಕಾರ ಶ್ರೀಧರ , ಜನಾರ್ಧನ, ರವರಿಗೆ  ಮಾರಾಟ ಮಾಡಿದ್ದು ಇನ್ನೂ ಕೆಲವರಿಗೆ ಮಾರಾಟ ಮಾಡಿದ್ದಾರೆ ಅವರ ಹೆಸರು ಗೊತ್ತಿಲ್ಲ. ದಿನಾಂಕ 31-05-1996 ರಲ್ಲಿ ನನ್ನ ತಂದೆ ಖಾಸಿಂ ಬ್ಯಾರಿ ಎನ್ನುವವರಿಗೆ 20 ಸೆಂಟ್ಸ್ ಜಾಗವನ್ನು  ಸರ್ವೆ ನಂಬರ್ 85/4 ರಲ್ಲಿ ಕ್ರಯಪತ್ರ ಮುಖೇನ ಮಾರಾಟ ಮಾಡಿದ್ದಾರೆ ಎಂದರೆ ಸರಿ, ದಿನಾಂಕ 05-06-1996 ರಲ್ಲಿ ಶ್ರೀಧರ ಪ್ರಭು ಎನ್ನುವವರಿಗೆ ಸರ್ವೆ ನಂಬರ್ 85/4ಎ ಪೈಕಿ 72 ಸೆಂಟ್  , 115  ರ ಪೈಕಿ 78 ಸೆಂಟ್ , ದಿನಾಂಕ 23-04-1994 ರಲ್ಲಿ ಸೂರ್ಯನಾರಾಯಣ ಭಟ್ ರವರಿಗೆ  ಸರ್ವೆ ನಂಬರ್ 85/4  ಪೈಕಿಯ ಲ್ಲಿ 66 ಸೆಂಟ್  ಮತ್ತು 30 ಸೆಂಟ್ , 115 ಪೈಕಿ 28 ಸೆಂಟ್  ಜಾಗವನ್ನು  ಕ್ರಯಪತ್ರಗಳ ಮುಖೇನ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಗೆ  ದಿನಾಂಕ 31-05-1996, ದಿನಾಂಕ 05-06-1996 ಹಾಗೂ ದಿನಾಂಕ 23-04-1996 ರ ಕ್ರಯಪತ್ರಗಳ ದೃಢೀಕೃತ ಪ್ರತಿಯನ್ನು ತೋರಿಸಲಾಗಿ ಆ ಕ್ರಯಪತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಸದರಿ ಕ್ರಯಪತ್ರಗಳನ್ನು  ನಿ.ಡಿ.1 ರಿಂದ ನಿ.ಡಿ.3  ಎಂದು ಗುರುತಿಸಲಾಯಿತು.

6. ಸೀತಾರಾಮ ಪ್ರಭು ರವರಿಗೆ 85/4 ರ ಪೈಕಿ 5 ಸೆಂಟ್ ಜಾಗವನ್ನು ನನ್ನ ತಂದೆಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.  ನಿ.ಡಿ.1 ರಿಂದ 3 ಕ್ರಯಪತ್ರಗಳಲ್ಲಿ ನನ್ನ ತಂದೆ ಕೊಟ್ಟಿರುವ ಮಾಹಿತಿ ಮತ್ತು ಒಕ್ಕಣೆಗಳು ಸರಿ ಇರುತ್ತದೆ.  ನನ್ನ

ತಂದೆಯಿಂದ ಸ್ವತ್ತು ಖರೀದಿಸಿದ ವ್ಯಕ್ತಿಗಳ ಪೈಕಿ ಕೆಲವರು ಬೇರೆ ವ್ಯಕ್ತಿಗಳಿಗೆ ಅವರು ಖರೀದಿಸಿದ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ.

7.ನನ್ನ ಚಿಕ್ಕಪ್ಪ ಬಾಲಕೃಷ್ಣ ನಾಯಕ್ ರವರು ಕೂಡಾ ಅವರಿಗೆ ಪಾಲಿನಲ್ಲಿ ಬಂದ ಸ್ವತ್ತುಗಳ ಪೈಕಿ ಕೆಲವು ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ನಿ.ಪಿ.1 ರಿಂದ 5 RTC ಗಳಲ್ಲಿ ನಮ್ಮ ತಂದೆಯ ಹೆಸರಿನ ಜೊತೆ ನಮ್ಮ ಹೆಸರು ಕೂಡಾ ಸೇರಿಸಬೇಕು , RTC ತಪ್ಪಾಗಿದೆ ಎಂದು ಪ್ರಶ್ನಿಸಿ ನಾವು ಕೇಸು ದಾಖಲು ಮಾಡಿಲ್ಲ.

8. ನಾವು ಮೂಲತಃ ಬಂಟ್ವಾಳತಾಲೂಕಿನ ವಿಟ್ಲದವರು ಅಲ್ಲ , ಕಾಪು ಮನೆ , ಕೋಡಿಂಬಾಡಿ ಗ್ರಾಮದವರು. ಗೇಣಿ ಚೀಟಿ ಇದ್ದ ಬಗ್ಗೆ ನಾನು ಕೇಳಿ ನನ್ನ ತಂದೆಯಿಂದ ಪಡೆದಿಲ್ಲ. ರತ್ನಾವತಿ ಎನ್ನುವವರು ಭೂಮಾಲೀಕರು ಆಗಿದ್ದರು ಎಂದರೆ ಸರಿ. ಅವರ ಪರವಾಗಿ ವಕೀಲಾರಾದ ನಿರ್ಮಲ್ ಕುಮಾರ್ ಎನ್ನುವವರು ಭೂ ನ್ಯಾಯ ಮಂಡಳಿಯಲ್ಲಿ ಸಾಕ್ಷಿ ಹೇಳಿದ ಬಗ್ಗೆ ನನ್ನ ತಂದೆ ಹೇಳಿದ್ದಾರೆ. ಅವರು ಭೂ ನ್ಯಾಯಮಂಡಳಿಯಲ್ಲಿ ಹೇಳಿದ್ದ ಸಾಕ್ಷ್ಯಸರಿ ಇದೆ.

9.ಅಪ್ಪಣ್ಣ ನಾಯ್ಕನವರು ಮಾತ್ರ ಗೇಣಿಗೆ ಇದ್ದದ್ದು ಎಂದರೆ ಸರಿಯಲ್ಲ. ಅಪ್ಪಣ್ಣ ನಾಯ್ಕರವರು ಮೃತರಾದ ನಂತರ ಹೆಂಡತಿ ಪದ್ಮಾವತಿ ಮತ್ತು ನನ್ನ ತಂದೆ ಭೂ ನ್ಯಾಯಮಂಡಳಿಗೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ.

10. ಈ ದಾವೆ ಸಲ್ಲಿಸುವಾಗ ವಕೀಲರಿಗೆ ಮಾಹಿತಿಯನ್ನು ನಾವೇ ಕೊಟ್ಟಿದ್ದೇವೆ. ಗೇಣಿ ಹಕ್ಕು ಪಿತ್ರಾರ್ಜಿತ ಎಂದು ತೋರಿಸಲು ನನ್ನ ಹತ್ತಿರ ದಾಖಲೆ ಇಲ್ಲ , ಅದರೆ ನನ್ನ ತಂದೆ ಹೇಳುತ್ತಿದ್ದರು. ಈ ದಾವೆ ಸಲ್ಲಿಸುವ ಕಾಲಕ್ಕೆ ನನ್ನ ತಂದೆ ಆರೋಗ್ಯವಾಗಿ ಇದ್ದರು. ನನ್ನ ತಂದೆ ಯಾವತ್ತೂ ಕೂಡಾ ಗೇಣಿ ಪಿತ್ರಾರ್ಜಿತವಾಗಿ ಇತ್ತು ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಗೇಣಿ ಪಿತ್ರಾರ್ಜಿತವಾಗಿ ಇತ್ತು ಎಂದು ನನ್ನ ತಂದೆ ಹೇಳಿದ ಬಗ್ಗೆ ವಾದಪತ್ರದಲ್ಲಿ ತಿಳಿಸಿಲ್ಲ.

11. ಸೂರ್ಯನಾರಾಯಣ ಭಟ್ ರವರಿಗೆ ಕ್ರಯಪತ್ರ ಮಾಡುವ ಮುನ್ನ ಕ್ರಯಪತ್ರದಲ್ಲಿ ನಮೂದಿಸಿರುವ ಸ್ವತ್ತುಗಳ ಪೈಕಿ ಕೆಲವನ್ನು ಎ. ಗಣಪತಿಭಟ್ ಮತ್ತು ಎನ್ ಕೆ ವಾರಿಜ ಎನ್ನುವವರಿಗೆ ಅಗ್ರಿಮೆಂಟ್ ಮತ್ತು ಪವರ್ ಆಫ್ ಅಟಾರ್ನಿ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕ್ರಯಪತ್ರ ಮಾಡುವ ಮುನ್ನ ಆದ ಒಪ್ಪಂದದಂತೆ ಎ. ಗಣಪತಿಭಟ್ ಮತ್ತು ಎನ್ ಕೆ ವಾರಿಜ ರವರು ಕೂಡಾ ಸೂರ್ಯನಾರಾಯಣ ಭಟ್ ರವರಿಗೆ ಮಾಡಿಕೊಟ್ಟ ಕ್ರಯಪತ್ರದಲ್ಲಿ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

12. ನನ್ನ ತಂದೆ ಜೋರು ಸ್ವಭಾವದವರಾಗಿದ್ದು ಮಕ್ಕಳೆಲ್ಲಾ ಹೆದರುತ್ತಿದ್ದೆವು ಎಂದರೆ ಸುಳ್ಳು. ನನ್ನ ಸಹೋದರ ರಾಜೇಶ್ ರವರ ಮೇಲೆ ಹೆಚ್ಚು ಕೋಪ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ಕೆಲವು ಸಿವಿಲ್ ಕೇಸುಗಳ ನಿಮಿತ್ತ ಇಲ್ಲಿನ

ಸಿವಿಲ್ ನ್ಯಾಯಾಲಯಕ್ಕೆ ಹಾಗೂ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಮೇಲೆ ಕೆಲವು ಕ್ರಿಮಿನಲ್ ಪ್ರಕರಣಗಳೂ ಇದ್ದವು ಎಂದರೆ ಸರಿಯಲ್ಲ. ನನ್ನ ತಂದೆಗೆ ವಕೀಲರುಗಳ ಪರಿಚಯ ಇದುದ ಅವರ ಕಚೇರಿಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಅವರು ಜೀವಂತ ಇದ್ದಾಗ ಅವರ ಇಂಗ್ಲೀಷ್ ಭಾಷಯಲ್ಲಿ ಸಹಿ ಮಾಡುತ್ತಿದ್ದರು ಸಾಕ್ಷಿ ಮುಂದುವರಿದು ಕನ್ನಡದಲ್ಲೂ ಸಹಿ ಮಾಡುತ್ತಿದ್ದರು. ನನ್ನ ತಂದೆಗೆ ಕನ್ನಡ ಚೆನ್ನಾಗಿ ಓದಿ ಬರೆಯುತ್ತಿದ್ದರು. ಅವರು ಇಂಗ್ಲೀಷ್ ಬಾಷೆ ಓದಿ ಅರ್ಥಮಾಡಿಕೊಳ್ಳುತಿದ್ದರು . ಬರೆಯಲು ಅಷ್ಟಾಗಿ ಬರುತ್ತಿರಲಿಲ್ಲ. ತಮ್ಮ ಮರಣದವರೆಗೆ ನನ್ನ ತಂದೆ ಓಡಾಡುತ್ತಿರಲಿಲ್ಲ. ನನ್ನ ತಂದೆ ಮರಣ ಹೊಂದಿದ ನಂತರ ಅವರನ್ನು ಕೊನೆಯ ಬಾರಿ ನೋಡಿದ್ದೇನೆ.

13. ದಾವಾ ಸ್ವತ್ತುಗಳ ಪೈಕಿ ಬಹುತೇಕ ಸ್ವತ್ತುಗಳು 3ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇದ್ದವು ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಒಂದು ಮನೆ ಕಟ್ಟಿದ್ದಾರೆ ಎಂದರೆ ಸರಿ. ಆ ಮನೆ ಕಟ್ಟುವ ಪೂರ್ವ 1ನೇ ಪ್ರತಿವಾದಿ , 1(ಎ) , 2 ಮತ್ತು 3ನೇ ಪ್ರತಿವಾದಿಗಳು ಒಟ್ಟಾಗಿ ಒಂದೇ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿ. ಒಟ್ಟಾಗಿ ವಾಸ ಮಾಡುತ್ತಿದ್ದಾಗ 2ನೇ ಪ್ರತಿವಾದಿ ಬಂಟ್ವಾಳದ ಸಿದ್ದಕಟ್ಟೆ ಎಂಬಲ್ಲಿ ಆತನ ಹೆಂಡತಿಯ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಸುಗಮ ಬಸ್ ನ ಡ್ರೈವರ್ ಆಗಿದ್ದರು ಎಂದರೆ ಸರಿ. ಮಣಿಪಾಲ್ ದಿಂದ ಕೊಟ್ಟಾಂಯಂ ಎನ್ನು ವ ಮಾರ್ಗದಲ್ಲಿ ಬಸ್ ಚಲಾಯಿಸುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. 3ನೇ ಪ್ರತಿವಾದಿ ಮನೆ ಕಟ್ಟಿದ ನಂತರ ತನ್ನ ಮನೆಯಲ್ಲಿ ತಾನು ಮತ್ತು ತನ್ನ ಹೆಂಡತಿ ಮಕ್ಕಳು ಮಾತ್ರ ವಾಸ ಇದ್ದರು. ನನ್ನ ಅಪ್ಪ ಅಮ್ಮನನ್ನು ಕರೆದುಕೊಂಡು ಹೋಗಿಲ್ಲ ಎಂದರೆ ಸರಿ. ನನ್ನ ಅಪ್ಪ ಮತ್ತು ಅಮ್ಮ ಹಳೆಯ ಮನೆಯಲ್ಲಿಯೇ ಪ್ರತ್ಯೇಕ ವಾಸ ಇದ್ದರು ಎಂದರೆ ಸಾಕ್ಷಿಯು ಅವರ ದೊಡ್ಡ ಮಗ 2ನೇ ಪ್ರತಿವಾದಿಯ ಜೊತೆ ವಾಸ ಇದ್ದರು ಎಂದು ನುಡಿಯುತ್ತಾರೆ.

14. ನನ್ನ ತಾಯಿ ವಿವೇಕಾನಂದ ಕಾಲೇಜಿನ ಬಳಿ ಇದ್ದ ಒಂದು ಪಿ.ಜಿ.ಯಲ್ಲಿ ಅಡಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ತಾಯಿಯರನ್ನು 2ನೇ ಪ್ರತಿವಾದಿ ನಾವು ಕೇಸು ಹಾಕಿದ ಕಾರಣ ನೋಡಿಕೊಳ್ಳುತ್ತಿಲ್ಲದ ಕಾರಣ ನನ್ನ ತಾಯಿ ಕೆಲಸಕ್ಕೆ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಯವರು ಕೇಳಿಕೊಂಡರು ನಾವು ಹೆಣ್ಣು ಮಕ್ಕಳು ಅವರನ್ನು ನೋಡಿಕೊಂಡಿಲ್ಲ ಎಂದರೆ ಸಾಕ್ಷಿಯು ಅವರಿಗೆ ಆಸ್ತಿ ಇದ್ದು ಅವರಿಗೆ ಗಂಡು ಮಕ್ಕಳು ಇದ್ದ ಕಾರಣ ನಾವು ನೋಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ಅದಾದ ಮೇಲೆ 2ನೇ

ಪ್ರತಿವಾದಿ ನನ್ನ ಚಿಕ್ಕಪ್ಪ ಕೇಳಿಕೊಂಡ ಮೇರೆಗೆ ತಾನೇ ನನ್ನ ತಂದೆತಾಯಿಯ ಜೊತೆ ಹೋಗಿ ವಾಸ ಮಾಡಿಕೊಂಡು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

15. ನಂತರ 5ನೇ ಪ್ರತಿವಾದಿಗೆ ಕ್ರಯಪತ್ರ ಆದ ನಂತರ ಆ ಸ್ವತ್ತಿನಲ್ಲಿ ಮನೆಕಟ್ಟಿಕೊಂಡು ಅವರು ಮತ್ತು 2ನೇ ಪ್ರತಿವಾದಿ ವಾಸ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಆ ಕ್ರಯಪತ್ರವನ್ನು ಮೋಸದಿಂದ ನನ್ನ ತಂದೆಯಿಂದ ಮಾಡಿಸಿಕೊಂಡಿದ್ದು ಅದನ್ನು ನಾನು ಒಪ್ಪುವುದಿಲ್ಲ ಎಂದು ನುಡಿಯುತ್ತಾರೆ. ನನಗೆ , ನನ್ನ ಸಹೋದರ ಸಹೋದರಿಯವರಿಗೆ 2ನೇ ಪ್ರತಿವಾದಿಯ ಹೆಂಡತಿಯನ್ನು ಕಂಡರೆ ಆಗುವುದಿಲ್ಲ ಎಂದರೆ ಸರಿ.

16. ನನ್ನ ತಾಯಿಯ ಜೊತೆ ಅವರ ಎಲ್ಲಾ ಮಕ್ಕಳ ಸಂಬಂಧ ಸರಿ ಇದೆ. ಈಗಲೂ ಕೂಡಾ ನನನ್ನ ತಾಯಿಯ ಜೊತೆ ಮಾತನಾಡುತ್ತೇವೆ. ನನ್ನ ತಾಯಿ ಪ್ರಸ್ತುತ 2ನೇ ಪ್ರತಿವಾದಿ ಜೊತೆ ವಾಸಿಸುತ್ತಾರೆ. 2ನೇ ಪ್ರತಿವಾದಿ ಮನೆ ಕಟ್ಟಿದ ನಂತರ ನನ್ನ ತಂದೆ ಕೂಡಾ ನನ್ನತಾಯಿಯ ಜೊತೆ 2ನೇ ಪ್ರತಿವಾದಿಯ ಮನೆಯಲ್ಲಿ ವಾಸಮಾಡುತ್ತಿದ್ದರು ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯು ಮನೆ ಕಟ್ಟುವ ಮೊದಲೇ ನನ್ನ ತಂದೆ ಮೃತರಾಗಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಇಂತಿಷ್ಟೇ ಸಂಪಾದನೆ ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ಮತ್ತು ನನ್ನ ಸಹೋದರಿಯರ ಮದುವೆಯನ್ನು 2 ಮತ್ತು 3ನೇ ಪ್ರತಿವಾದಿಗಳು ಮಾಡಿದ್ದಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಬಸ್ ಮಾಲೀಕ ಮತ್ತು ಚಾಲಕ ಎಂದರೆ ಸರಿ.

( ಈ ಹಂತದಲ್ಲಿ ಸಾಕ್ಷಿಯ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ನೀಡಲಾಯಿತು.)

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.